64

ಲೌಕಿಕ ನ್ಯಾಯಗಳು

•

ನಲ್ವತ್ತ್ನಾಲ್ಕು 'ನ್ಯಾಯ'ಗಳ ವಿವರಣೆ.

ಸಂಗ್ರಾಹಕರು, ಲೇಖಕರು:

ಶ್ರೀ| ಕೆ.ಎಲ್.ಎನ್.ಉಪಾಧ್ಯಾಯ,

ಉಡುಪಿ.

1955.

ಒಂದಾಣೆ ಮಾಲೆ

ಒಂದಾಣೆ ಮಾಲೆಯಲ್ಲಿ
ಈ ವರೆಗೆ ಪ್ರಕಟವಾದ ಪುಸ್ತಕಗಳ ವಿವರ ಹೀಗಿದೆ:

೧.	‡ಕೆಪ್ಪಟೆರಾಯ (ವಿನೋದ ಕಥೆ)	ದಿ| ಎಂ. ಎನ್. ಕಾಮತ್.
೨.	‡ನಾರೀಶ್ವರರು (ಏಕಾಂಕ ಪ್ರಹಸನ)	ಶ್ರೀ| ಕುಡ್ವಿ ವಾಸುದೇವ ಶೆಣೈ.
೩.	‡ಕಳ್ಳನಿಗೆ ಸಂಭಾವನೆ ಮತ್ತು ಇತರ ಕಥೆಗಳು	ಶ್ರೀ| ಎಲ್. ಎಸ್. ನಾಯಕ.
೪.	‡ಸದ್ರಿ ಸುಬ್ಬ (ಏಕಾಂಕ ಪ್ರಹಸನ)	ದಿ| ಎಂ. ಎನ್ ಕಾಮತ್.
೫.	‡ಅದ್ಭುತ ತ್ಯಾಗ ಮತ್ತು ಇತರ ಕಥೆಗಳು	ವೈದ್ಯಗುರು ಎಂ. ಆರ್. ಭಟ್.
೬.	ಚುನಾವಣೆ ಅರ್ಥಾತ್ ಬನಾವಣೆ (ಏಕಾಂಕ ಪ್ರಹಸನ)	ಕುಡ್ವಿ ವಾಸುದೇವ ಶೆಣೈ.
೭.	‡'ಬೀಡಿ ಸೇದಬೇಡಿ' ಮತ್ತು 'ಆ ಮಗು' (ವಿನೋದ ಕಥೆಗಳು)	ದಿ| ಎಂ.ಎನ್.
೮.	‡ಇಂಗ್ಲಿಷ್–ಕನ್ನಡ ಅರ್ಥಕೋಶ (ಭಾರತ ಸಂವಿಧಾನದಿಂದ)	[ಕಾಮತ್.
೯	‡ಲಂಚಕ್ಕೆ ಸಂಚಕಾರ	ಡಾ| ಎಸ್. ಪಿ. ಭಟ್.
೧೦.	‡ಟಿಶ್ಯೂ ಔಷಧಿಗಳ ಕೈಪಿಡಿ.	ಶ್ರೀ| ಪಿ. ಎಸ್. ವೆಂಕಟಕೃಷ್ಣರಾವ್.
೧೧	ಶ್ರೀಕ್ಷೇತ್ರ ಧರ್ಮಸ್ಥಳ (ತೃತೀಯ ಮುದ್ರಣ).	
೧೨.	ಜೀವದ ಮೌಲ್ಯ ಮತ್ತು ಇತರ ಕಥೆಗಳು	ಶ್ರೀ| ಎಲ್. ಎಸ್. ನಾಯಕ.
೧೩	ಸತ್ತವನ ಸೇಡು ಮತ್ತು ಇತರ ಕಥೆಗಳು	ಡಾ| ವಿ. ಆರ್. ಭಟ್.
೧೪.	"ವೆಂಕಟನ ಸಂಕಟ" (ಏಕಾಂಕ ಪ್ರಹಸನ) ಮತ್ತು ಎರಡು ಕಥೆಗಳು	
೧೫.	ಬಾಬಿಗೆ ಬಾಸಿಂಗ (ಏಕಾಂಕ ಪ್ರಹಸನ)	ಶ್ರೀ| ಕುಡ್ವಿ ವಾಸುದೇವ ಶೆಣೈ.
೧೬.	ವೇಣೂರಿನ ಗತವೈಭವ	ದಿ| ಪಂಡಿತ ಲೋಕನಾಥ ಶಾಸ್ತ್ರಿಗಳು.
೧೭.	ಒಗಟುಗಳು (ದ್ವಿತೀಯ ಮುದ್ರಣ)	ಶ್ರೀ| ಟಿ. ಚಂದ್ರರಾಜ ಸೆಟ್ಟಿ.
೧೮.	ಜಗಳಗಂಟೆ ಮತ್ತು ಇತರ ಕಥೆಗಳು	ವೈದ್ಯಗುರು ಎಂ. ಆರ್. ಭಟ್.
೧೯.	ರಥೋತ್ಸವ.	
೨೦.	ಕರಿನಾಯಿ ಮತ್ತು ಮುಪ್ಪು	ದಿ| ಎಂ. ಎನ್. ಕಾಮತ್.
೨೧.	‡ಭಾರತದ ಮಹಾನಗರಗಳು (ಪ್ರಥಮ ಭಾಗ)	ಶ್ರೀ| ಟಿ. ಚಂದ್ರರಾಜ ಸೆಟ್ಟಿ.
೨೨.	‡ತಿರುಕ್ಕುರಲ್	ಶ್ರೀ| ಡಿ. ಪುಟ್ಟಸ್ವಾಮಿ, ಎಡ್ವೋಕೇಟ್.
೨೩.	ಸೂರ್ಯನ ಸಂಸಾರ ಮತ್ತು ಇತರ ಕಥೆಗಳು	ಶ್ರೀ| ಬಿ ಶಂಕರ ಭಟ್.
೨೪.	‡ಭಾರತದ ಮಹಾನಗರಗಳು (ದ್ವಿತೀಯ ಭಾಗ)	ಶ್ರೀ| ಟಿ. ಚಂದ್ರರಾಜ ಸೆಟ್ಟಿ.
೨೫.	ಧೈರ್ಯ ಮತ್ತು ಇತರ ಸತ್ಯ ಕಥಾನಕಗಳು	ಶ್ರೀ| ಎಲ್. ಎಸ್. ನಾಯಕ.
೨೬.	‡ಮಾರಾವತಾರ (ಏಕಪಾತ್ರ ಯಕ್ಷಗಾನ ಪ್ರಬಂಧ)	ಶ್ರೀ| ಜಿ.ಆರ್.ಪಾಂಡೇಶ್ವರ.
೨೭.	ಹಾಸವಿಲಾಸ (ಆರಿಸಿ ತೆಗೆದ ನಗೆಹನಿಗಳು)	ಶ್ರೀ| ಕುಡ್ವಿ ವಾಸುದೇವ ಶೆಣೈ.
೨೮.	ಸತ್ಯವಂತ ಬಾಬಿ [ಏಕಾಂಕ ಪ್ರಹಸನ]	ಶ್ರೀ| ಕುಡ್ವಿ ವಾಸುದೇವ ಶೆಣೈ.
೨೯.	ಜಾಣ್ಮೆಯ ಒಗಟುಗಳು	ಡಾ| ಎಸ್. ಪಿ. ಭಟ್.
೩೦.	ಜಾತಕ ಕಥೆಗಳು	ಶ್ರೀ| ಎಂ. ಸುಬ್ರಾಯನ್.
೩೧	ಕಾರ್ಕಳದ ಚರಿತ್ರೆ	ಶ್ರೀ| ಡಿ. ಪುಟ್ಟಸ್ವಾಮಿ, ಎಡ್ವೋಕೇಟ್.
೩೨.	ಮರ್ಜಿ [ಏಕಾಂಕ ಪ್ರಹಸನ]	ದಿ| ಎಂ. ಎನ್. ಕಾಮತ್.
೩೩.	ದರ್ಶನದ ಕಥೆಗಳು	ಶ್ರೀ| ಬಿ ಶಂಕರ ಭಟ್ಟ ಮತ್ತು ಶ್ರೀ| ಬಿ.ಎಂ.ಶರ್ಮಾ.

(ಪುಟ 17ಕ್ಕೆ ಮುಂದುವರಿದಿದೆ.)

ಲೌಕಿಕ ನ್ಯಾಯಗಳು

(ಕನ್ನಡದಲ್ಲಿ ಅರ್ಥವಿವರಣೆ ಸಹಿತ)

....

೧. ಅಶೋಕವನಿಕಾನ್ಯಾಯ

ಅಶೋಕವೃಕ್ಷದುಪವನದಲ್ಲಿ ರಾವಣನು ಸೀತೆಯನ್ನಿರಿಸಿದನು. ಲಂಕೆಯಲ್ಲಿ ಬಗೆಬಗೆಯ ಉಪವನಗಳಿರುವಾಗ ಅಶೋಕ ವನವನ್ನೇ ಸೀತೆಯ ಕಾವಲಿಗೆ ರಾವಣನು ಆಯ್ದುಕೊಳ್ಳಲು ಕಾರಣವನ್ನು ಊಹಿಸಲು ಬರುವದಿಲ್ಲ. ಹಾಗೆಯೇ ಒಂದು ಕೆಲಸವನ್ನು ಸಾಧಿಸಲು ಹಲವಾರು ದಾರಿಗಳು ಇರಬಹುದು. ಆದರೆ, ಒಂದು ಮಾರ್ಗವನ್ನವಲಂಬಿಸಿ ಒಬ್ಬನು ಕಾರ್ಯವನ್ನು ಸಾಧಿಸುತ್ತಾನೆ ಎಂಬರ್ಥದಲ್ಲಿ ಈ ನ್ಯಾಯವು ಬಂದಿದೆ.

೨. ಅಶ್ಮಲೋಷ್ಟ ನ್ಯಾಯ

ಒಂದು ಕಲ್ಲು ಮತ್ತು ಗಟ್ಟಿ ಮಣ್ಣು ಎಂದರ್ಥ. ಗಟ್ಟಿ ಮಣ್ಣನ್ನು ಹತ್ತಿಯೊಡನೆ ಹೋಲಿಸುವಾಗ ಅದನ್ನು ಗಟ್ಟಿಯೆನ್ನಬಹುದು. ಆದರೆ ಕಲ್ಲಿನೊಡನೆ ಹೋಲಿಸಿದಾಗ ಅದು ಮಿದುವೇ ಸರಿ. ಹಾಗೇ ಸಾಮಾನ್ಯ ಜನರ ಗೋಷ್ಠಿಯಲ್ಲಿ ಶ್ರೇಷ್ಠನೆನಿಸಿಕೊಂಡವನು ಮಹಾಜನರ ಗೋಷ್ಠಿಯಲ್ಲಿ ಸಾಮಾನ್ಯನೆನಿಸುವವು.

೩. ಅಂಧಗೋಲಾಂಗೂಲ ನ್ಯಾಯ

ಕುರುಡನು ಮತ್ತು ದನದ ಬಾಲವೆಂದರ್ಥ. ಧೂರ್ತನೊಬ್ಬನು ದಾರಿಗಾಣದೆ ಅಂಡಲೆಯುತ್ತಿರುವ ಕುರುಡನನ್ನು ಕಂಡು, ದಯಾವಂತನಂತೆ ನಟಿಸಿ ಸಹಾನುಭೂತಿಯಿಂದ ಮಾತಾಡಿದನು. ಕುರುಡನಿಗೆ ತಾನು ಸರಿದಾರಿ ತೋರುವೆನೆಂದು ಭರವಸೆ ಕೊಟ್ಟನು. ಕೊನೆಗೆ ಒಂದು ತುಡುಗು

ದನದ ಬಾಲವನ್ನು ಅವನ ಕೈಯಲ್ಲಿರಿಸಿ ನೀನು ಹೋಗಬೇಕೆಂದಿರುವಲ್ಲಿಗೆ ಇದು ಒಯ್ಯುವದೆಂದು ಹಾಸ್ಯಮಾಡಿದನು. ಕುರುಡನು ಅದರಿಂದಾಗಿ ತುಂಬ ಪೇಚಾಟಪಡುವನು.

ವೇದಾಂತಸೂತ್ರ ಭಾಷ್ಯದಲ್ಲಿ ಶಂಕರಾಚಾರ್ಯರು ಶಿಷ್ಯರನ್ನು ತಪ್ಪು ದಾರಿಗೆಳಿಸುವ ಗುರುವನ್ನು ಮೇಲಣ ನ್ಯಾಯವನ್ನು ಉದಾಹರಿಸಿ ನಿರಾಕರಿಸಿರುವರು.

೪. ಅಂಧಕ-ವರ್ತಕೀಯ ನ್ಯಾಯ

ಒಬ್ಬ ಕುರುಡನಿಗೆ ನಡೆಯುತ್ತಿರುವಾಗ ಲಾವಕ್ಕಿಯು ಅದೃಷ್ಟವಿಶೇಷದಿಂದ ದೊರಕುತ್ತದೆ. ಆಕಸ್ಮಿಕವಾಗಿ ತೆರೆದ ಭಾಗ್ಯೋದಯಕ್ಕೆ ಈ ನ್ಯಾಯವು ಅರ್ಥಪುಷ್ಟಿಯನ್ನು ಕೊಡುತ್ತದೆ. ಹುಟ್ಟು ಸಾವುಗಳಿಂದ ಕೂಡಿದ ಈ ಸಂಸಾರದಲ್ಲಿ ಮನುಷ್ಯಜನ್ಮವೂ, ದೊಡ್ಡ ವಂಶದಲ್ಲಿ ಜನಿಸುವದೂ, ಸಜ್ಜನರ ಗೋಷ್ಠಿಯೂ ಇವೇ ಮುಂತಾದುವು ಅಂಧಕ ವರ್ತಕೀಯ ನ್ಯಾಯದಂತೆ (ಸುಕೃತದಿಂದ) ದೊರಕುವವು.

೫. ಅಂಧ-ಗಜ ನ್ಯಾಯ

ಇದು ಲೋಕಪ್ರಸಿದ್ಧವಾದ ನ್ಯಾಯವು. ಒಂದು ಆನೆಯ ಆಕೃತಿಯನ್ನು ಹಲವು ಕುರುಡರೊಟ್ಟಾಗಿ ಬಗೆಯಲು ಯತ್ನಿಸಿದರು. ಒಬ್ಬನು ಅದರ ಸೊಂಡಿಲನ್ನು ಹಿಡಿದು ಅದು ಹೆಬ್ಬಾವಿನಂತಿದೆಯೆಂದು ತಿಳಿದುಕೊಂಡನು. ಅದರ ಕಾಲನ್ನು ಬಳಸಿದವನು ಅದು ಕಂಬದಂತೆಯೆಂದು ನಿಶ್ಚಯಿಸಿದನು. ಅದರ ಕಿವಿಯನ್ನು ಭಾವಿಸಿದವನು ಅದು ಗೆರಸೆಯಂತೆಯೆಂದು ಹೇಳಿಕೆಯನ್ನಿತ್ತನು. ಹೀಗೆ ಒಬ್ಬೊಬ್ಬರು ಒಂದೊಂದು ಭಾಗವನ್ನು ಪರಾಂಬರಿಸಿ ಬೇರೆ ಬೇರೆ ರೀತಿಯಲ್ಲಿ ಆನೆಯ ರೂಪವನ್ನು ಮನವರಿಕೆಮಾಡಿಕೊಂಡರು.

ಸುರೇಶ್ವರಾಚಾರ್ಯರು ವಾರ್ತಿಕದಲ್ಲಿ 'ಒಬ್ಬನೇ ದೋಷದೂರನಾದ ದೇವರನ್ನು ಕುರುಡರ ನಾನಾವಿಧ ಹೇಳಿಕೆಗಳಂತೆ ಬಹುಜನರು ಬಹುವಿಧವಾಗಿ ಭಾವಿಸುತ್ತಾರೆ' ಎಂದಿರುವರು.

೬. ಕಾಕತಾಲೀಯ ನ್ಯಾಯ

ತಾಳೆಯ ಮರದ ಸೋಗೆಯಲ್ಲಿ ಕಾಗೆಯು ಹಾರಿಬಂದು ಕುಳಿತಿತು. ಆಗಲೇ ತಾಳೆಯ ಕಾಯಿಯೊಂದು ಅದರ ತಲೆಯ ಮೇಲೆ ಬಿದ್ದು ಕಾಗೆಯು ಸತ್ತಿತು. ಘಟನಾನುಘಟನೆಯಿಂದ ನಡೆದ ಕಾರ್ಯವನ್ನು ಈ ನ್ಯಾಯವು ಸೂಚಿಸುತ್ತದೆ. ದೇವದತ್ತನು ಮನೆಯಿಂದ ಹೊರಟುದಕ್ಕೂ ಕಳ್ಳರು ಆತನ ಮೇಲೆ ಬಿದ್ದುದಕ್ಕೂ ಸಮ ಆಯಿತು. ಇದು ಕಾಕತಾಲೀಯ ನ್ಯಾಯದಿಂದ ಒದಗಿದ ದುರಂತ.

೭. ಕಾಕದಂತಪರೀಕ್ಷಾ ನ್ಯಾಯ

'ವಾಯಸದಂತ ವಿಮರ್ಶನ ನ್ಯಾಯ'ವೆಂದು ಇದನ್ನು ಕರೆಯುವುದೂ ಉಂಟು. ಕಾಗೆಯ ಹಲ್ಲನ್ನು ಎಣಿಸುವ ಯತ್ನವೆಂದರ್ಥ. ಪ್ರಯೋಜನ ವಿಲ್ಲದ ಅರ್ಥಸಿದ್ಧಿಯಿಲ್ಲದ ಕೆಲಸದಲ್ಲಿ ತೊಡಗಿದಾಗ ಅದು ಕಾಕದಂತ ಪರೀಕ್ಷಾನ್ಯಾಯದಂತೆ ವ್ಯರ್ಥವೆನ್ನುವರು.

೮. ಕೂಪಮಂಡೂಕ ನ್ಯಾಯ

ಬಾವಿಯಲ್ಲಿರುವ ಕಪ್ಪೆಯೆಂದರ್ಥ. ಲೋಕಾನುಭವವಿಲ್ಲದವನಿಗೆ ಈ ನ್ಯಾಯವನ್ನು ಪ್ರಯೋಗಿಸುತ್ತಾರೆ. ಮನೆಯ ಸಂಕುಚಿತ ಆವರಣದ ಲ್ಲಿದ್ದು ವಿಶಾಲ ಜಗತ್ತಿನ ಗಾಳಿತಾಗದ ಮನುಷ್ಯನು "ಕೂಪಮಂಡೂಕ"ಕ್ಕೆ ಸರಿಹೋಲುವನು. ಅನೇಕ ಅದ್ಭುತ ವಾರ್ತಾಬಹುಲವಾದ ಭೂಮಂ ಡಲವನ್ನು ಸುತ್ತದೆ ಇರುವವನು ಬಾವಿಯೊಳಗಿನ ಕಪ್ಪೆಯಂತೆ.

೯. ಘಟ್ಟ ಕುಟ್ಟೀ ಪ್ರಭಾತ ನ್ಯಾಯ

ಸುಂಕದಕಟ್ಟೆಯ ಹತ್ತಿರವೇ ಬೆಳಗಾದುದು ಎಂದರ್ಥ. ಒಬ್ಬ ಮನುಷ್ಯನು ಸುಂಕವನ್ನು ತಪ್ಪಿಸಲೋಸುಗ ಬಳಸುದಾರಿ ಹಿಡಿದು ಅಲೆ ದಾಡಿ ಅಲೆದಾಡಿ ಬೆಳಗಾಗುವ ಹೊತ್ತಿಗೆ ಸುಂಕದಕಟ್ಟೆಯ ಹತ್ತಿರವೇ ತಂಗುತ್ತಾನೆ. ಮತ್ತು ಸುಂಕದಾಳುಗಳ ಕೈಗೆ ಸಿಕ್ಕುತ್ತಾನೆ. ಕಷ್ಟಪಟ್ಟೂ

ದರೂ ಉದ್ದೇಶಿಸಿದ ಕಾರ್ಯವು ನೆರವೇರದೆ ಹೋಗುವದಕ್ಕೆ ಈ ನ್ಯಾಯವು ಉದಾಹರಿಸಲ್ಪಡುತ್ತದೆ.

೧೦. ಘುಣಾಕ್ಷರ ನ್ಯಾಯ

ಮರವನ್ನು ಅಥವಾ ಪುಸ್ತಕವನ್ನು ಕೊರೆಯುವ ಕೀಟವು ಕೊರೆಯುತ್ತ ಹೋದಹಾಗೆ ಕೊರೆದಲ್ಲಿ ಒಂದು ಅಕ್ಷರದಂತೆ ಕಾಣಿಸಿಕೊಳ್ಳುವದಕ್ಕೆ ಘುಣಾಕ್ಷರ ನ್ಯಾಯವೆನ್ನುತ್ತಾರೆ. ಇದು ಕೇವಲ ಯಾದೃಚ್ಛಿಕ; ಬುದ್ಧಿಪೂರ್ವಕವಲ್ಲ. ದಡ್ಡನಿಂದ ಒಂದು ಚಾತುರ್ಯದ ಕೆಲಸ ನಡೆದರೆ ಅದು ಕೇವಲ ಘುಣಾಕ್ಷರ ನ್ಯಾಯದಂತೆ ನಡೆದುದೆಂದು ತಿಳಿಯಬೇಕು.

೧೧. ದೇಹಲೀ ದೀಪನ್ಯಾಯ

ಹೊಸಲಲ್ಲಿಟ್ಟ ದೀಪವು ಒಳಗೂ ಹೊರಗೂ ಬೆಳಕು ನೀಡುವದೆಂದರ್ಥ. ಒಂದೇ ಕೆಲಸವು ಎರಡು ಫಲಗಳನ್ನು ತಂದಲ್ಲಿ ಈ ನ್ಯಾಯವನ್ನು ಮುಂದಿಡಬಹುದು. ಮಗಳಿಗೆ ವರನನ್ನು ಹುಡುಕುತ್ತ ಹೊರಟ ಗೃಹಸ್ಥನಿಗೆ ಹೋದಲ್ಲಿ ಪುಷ್ಕಳ ಊಟವೂ ಸಿಕ್ಕಿತು. ಸುಯೋಗ್ಯ ವರನೂ ದೊರಕಿದನು. ಗೃಹಸ್ಥನ ವರಾನ್ವೇಷಣವು ಮೃಷ್ಟಾನ್ನವನ್ನೂ ತಂದಿತು; ವರನನ್ನೂ ತಂದಿತು. ಹೀಗೆ ಒಂದು ಕೆಲಸದಿಂದ ಎರಡು ಪ್ರಯೋಜನಗಳನ್ನು ದೊರಕಿಸಿಕೊಳ್ಳುವದೇ, ಈ ನ್ಯಾಯದ ಮುಖ್ಯವಾದ ಅರ್ಥ.

೧೨. ನಷ್ಟಾಶ್ವದಗ್ಧರಥ ನ್ಯಾಯ

ಕಳೆದುಕೊಂಡ ಕುದುರೆ ಮತ್ತು ಸುಟ್ಟುಹೋದ ರಥವೆಂದರ್ಥ. ಇದರ ಹಿನ್ನೆಲೆಯಲ್ಲಿ ಒಂದು ಕತೆಯು ಹೇಳಲ್ಪಟ್ಟಿದೆ.

ಇಬ್ಬರು ಪ್ರವಾಸಿಗಳು ತಮ್ಮ ತಮ್ಮ ರಥದಲ್ಲಿ ಕುಳಿತು ಪ್ರಯಾಣ ಹೊರಟರು. ಅವರಲ್ಲಿ ಒಬ್ಬನು ಮಧ್ಯದಾರಿಯಲ್ಲಿ ತನ್ನ ರಥದ ಕುದುರೆಗಳನ್ನು ಕಳೆದುಕೊಂಡನು. ಮತ್ತೊಬ್ಬನು ಉಳಕೊಂಡ ಮನೆಯೂ ಸುಟ್ಟುಹೋಗಿ ಆತನ ರಥವೂ ಅದರೊಡನೆ ಸುಟ್ಟುಹೋಗುತ್ತದೆ. ಆಗ ಕುದುರೆಯಿಲ್ಲದವನು ತನ್ನ ರಥವನ್ನು ಆತನಿಗೊಪ್ಪಿಸಿದನು. ರಥ ಸುಟ್ಟುಕೊಂಡ

ವನು ತನ್ನ ಕುದುರೆಗಳನ್ನು ಆ ರಥಕ್ಕೆ ಹೂಡಿ ಇಬ್ಬರೂ ಕುಳಿತು ಪ್ರಯಾಣವನ್ನು ಮುಂದರಿಸುವರು.

ಹೀಗೆ ಒಬ್ಬರಿಂದೊಬ್ಬರಿಗೆ ದೊರಕಿದ ಉಪಕಾರವನ್ನು ಹೇಳುವಲ್ಲಿ ಈ ನ್ಯಾಯವು ಅರ್ಥವತ್ತಾಗಿದೆ.

೧೩. ಪಂಕಪ್ರಕ್ಷಾಲನ ನ್ಯಾಯ

ಕೆಸರನ್ನು ಮುಟ್ಟಿ ಮತ್ತೆ ತೊಳೆಯುವದು ಎಂದರ್ಥ. ಧರ್ಮ ಮಾಡುವದಕ್ಕಾಗಿಯಾದರೂ ಹಣವನ್ನು ಸಂಗ್ರಹಿಸುವದು ತಪ್ಪು. ಧನ ಸಂಗ್ರಹದ ಪಾಪವನ್ನು ಮಾಡಿ, ಆ ಪಾಪವನ್ನು ಕಳೆದುಕೊಳ್ಳುವದಕ್ಕೆ ಧರ್ಮವನ್ನಾಚರಿಸುವದಕ್ಕಿಂತ, ಹಣವನ್ನು ಸಂಗ್ರಹಿಸದೇ ಇರುವದು ಮೇಲಲ್ಲವೆ? ರೋಗ ಚಿಕಿತ್ಸೆಗಿಂತ ರೋಗನಿರೋಧವು ಮೇಲು— ಮುಂತಾದುವು ಈ ನ್ಯಾಯದಿಂದ ಸಿದ್ಧವಾಗುವವು.

೧೪. ಪಂಜರಚಾಲನ ನ್ಯಾಯ

ಹಕ್ಕಿಗಳು ಗೂಡನ್ನು ಅಲುಗಾಡಿಸುವದು ಎಂದರ್ಥ. ಒಂದು ಗೂಡಿನಲ್ಲಿ ಸೆರೆಸಿಕ್ಕಿದ ಹನ್ನೊಂದು ಹಕ್ಕಿಗಳು ಪ್ರತ್ಯೇಕ ಪ್ರತ್ಯೇಕ ಅಲ್ಲಾಡುತ್ತ ಇರುವಾಗ ಎಲ್ಲ ಪಕ್ಷಿಗಳ ಒಟ್ಟು ಯತ್ನವು ಇಡೀ ಗೂಡನ್ನು ಚಲನಗೊಳಿಸಿತು. ಒಬ್ಬೊಬ್ಬರು ತಮ್ಮ ಮನೆಬಾಗಿಲು ವಠಾರವನ್ನು ಶುಚಿಯಾಗಿರಿಸುವದರಿಂದ ಆ ಇಡೀ ಕೇರಿಯೇ ಶುಚಿಯಾಗಿರುವ ನಾಗರಿಕ ನೀತಿಗೆ ಈ ನ್ಯಾಯವನ್ನು ಉದಾಹರಿಸಬಹುದು.

೧೫. ಪಿಷ್ಟಪೇಷಣ ನ್ಯಾಯ

ಬೀಸಿದ ಹಿಟ್ಟನ್ನೇ ಪುನಃ ಬೀಸುವದು ಎಂದರ್ಥ. ಹೇಳಿದ್ದನ್ನೇ ಪುನರುಚ್ಚರಿಸುವದೂ, ಅರ್ಥಹೀನವಾಗಿ ವಿವರಿಸುವದೂ ಮುಂತಾದ ನಿಷ್ಪ್ರಯೋಜಕ ವಿಷಯಗಳನ್ನೇ ಹೇಳುವಲ್ಲಿ ಈ ನ್ಯಾಯವು ಬರುತ್ತದೆ.

೧೬. ಭಿಕ್ಷುಪಾದ ಪ್ರಸಾರಣ ನ್ಯಾಯ

ಒಬ್ಬ ಭಿಕ್ಷುವು ತನಗೆ ಊಟ, ಉಡಿಗೆ, ವಸತಿ ಮುಂತಾದ ಸೌಕರ್ಯ ಸಿಗಬೇಕೆಂದು, ಒಬ್ಬ ಶ್ರೀಮಂತನ ಮನೆಗೆ ಹೋದನು. ಭಿಕ್ಷುವು

"ಮೊದಲು ತನಗೆ ಹೆಜ್ಜೆಯೂರಲು ಒಂದಿನಿತು ಅವಕಾಶಸಿಗಲಿ; ಮತ್ತೆ ಆತನ ಪರಿಚಯದಿಂದ ಎಲ್ಲವನ್ನೂ ದೊರಕಿಸಿಕೊಳ್ಳಬಹುದೆಂದು" ಎಣಿಸುತ್ತಾನೆ. ಆದ್ದರಿಂದ ಮೊದಲಾಗಿ ದೊರಕಿದ ಕೊಂಚ ಭಿಕ್ಷೆಯನ್ನೂ ಆದರದಿಂದ ತೆಗೆದುಕೊಂಡು ಮೆಲ್ಲಗೆ ಮನೆಯೊಳಗೆ ಕಾಲಿಟ್ಟು, ತನ್ನ ಇಷ್ಟಾರ್ಥವನ್ನು ಪಡೆಯುವನು.

೧೭. ವಿಷವೃಕ್ಷ ನ್ಯಾಯ

ವಿಷದ ಹಣ್ಣನ್ನೀಯುವ ಮರವೆಂದರ್ಥ. ಅಂಥ ಮರವನ್ನಾದರೂ ತಾನೇ ಬೆಳೆಸಿ ತನ್ನ ಕೈಯಿಂದಲೇ ಕಡಿಯಬಾರದು.

ಉಪಮಿತಿ ಭಾವಪ್ರಪಂಚ ಎಂಬ ಗ್ರಂಥದಲ್ಲಿ ಓರ್ವನು ತನ್ನ ಮಗನನ್ನು ಗದರಿಸುತ್ತ "ಕೈಯ್ಯಾರೆ ಸಾಕಿ ಸಲಹಿ ಬೆಳೆಸಿದ ಮಗನನ್ನು ತಾನೇ ಗದರಿಸಿದೆನಲ್ಲ!" ಎಂದು ದುಃಖಿಸಿದ ಸಂದರ್ಭದಲ್ಲಿ ಈ ನ್ಯಾಯವನ್ನುದಾಹರಿಸಿರುವರು.

೧೮. ವೃದ್ಧಕುಮಾರೀ ವಾಕ್ಯ ನ್ಯಾಯ

ಪ್ರಾಯ ಕಳೆದ ಕನ್ಯೆಯ ಭಿನ್ನಹವೆಂದರ್ಥ. ಈಕೆಯು ಇಂದ್ರನನ್ನು ಒಲಿಸಿ ತನ್ನ ಮಕ್ಕಳು ಹಾಲನ್ನವನ್ನು ಕಂಚೀ ಬಟ್ಟಲಲ್ಲಿ ಉಣ್ಣುವಂತೆ ವರವನ್ನು ಕರುಣಿಸಲು ಕೇಳಿಕೊಳ್ಳುವಳು. ಆಕೆಗೆ ಪತಿಯು ಇಲ್ಲದ ಬಳಿಕ ಎಲ್ಲಿಯ ಮಕ್ಕಳು? ಎಲ್ಲಿಯ ಅನ್ನ? ಎಲ್ಲಿಯ ಕ್ಷೀರ? ಆದರೆ ಆಕೆಯು ಒಂದೇ ವರದಿಂದ ಪತಿಪುತ್ರ ಸಂಪತ್ತನ್ನೆಲ್ಲ ಪ್ರಾರ್ಥಿಸಿದಂತಾಯಿತು. ಹೀಗೆ ಅರ್ಥವುಳ್ಳ ವಾಕ್ಯವನ್ನು 'ವೃದ್ಧ ಕುಮಾರೀವಾಕ್ಯ ನ್ಯಾಯದಂತೆ' ಅನ್ನುವದುಂಟು.

೧೯. ಶ್ವಶ್ರೂ ನಿರ್ಗಚ್ಛೋಕ್ತಿ ನ್ಯಾಯ

ಅತ್ತೆಯು ಮನೆಗೆ ಬಂದ ಭಿಕ್ಷುಕನನ್ನು ದೂರ ಅಟ್ಟುವದು ಎಂದರ್ಥ. ಜ್ಞಾನೋತ್ತಮನು ಈ ನ್ಯಾಯದ ಕುರಿತು ಹೀಗೆ ಹೇಳುವನು:- ಭಿಕ್ಷೆಯನ್ನೆತ್ತಲು ಬಂದ ಭಿಕ್ಷುಕನಿಗೆ ಭಿಕ್ಷೆಯನ್ನು ಹಾಕುವದಿಲ್ಲೆಂದು ನಿರಾಕರಿಸಿದ ಸೊಸೆಯನ್ನು ಅತ್ತೆಯು ಗದರಿಸಿ ಅವನನ್ನು ಪುನಃ ಕರೆದಳು.

ಹಿಂತಿರುಗಿಬಂದ ಭಿಕ್ಷುಕನಿಗೆ ಅತ್ತೆಯು ಭಿಕ್ಷೆ ಹಾಕದೆ ಮರಳಿ ಕಳುಹಿಸಿದಳು. ಇದರಂತೆ ಒಳ್ಳೇ ಯುಕ್ತಿಗಳಿಂದ ಕೂಡಿರದ ವಾದವನ್ನು ಶ್ವಶ್ರೂನಿರ್ಗಚ್ಛೋಕ್ತಿ ನ್ಯಾಯದಿಂದ ನಿರಾಕರಿಸುತ್ತಾರೆ.

೨೦. ಸಿಂಹಾವಲೋಕನ ನ್ಯಾಯ

ಸಿಂಹವು ನೋಡುವದೆಂದರ್ಥ. ಸಿಂಹವು ಕೊಳ್ಳೆಯನ್ನು ಹಿಡಿದ ಬಳಿಕ ಹಿಂದೆ ಮುಂದೆ ತನ್ನ ದೃಷ್ಟಿಯನ್ನು ಹಾಯಿಸುತ್ತದೆ,—ತನ್ನ ಆಹಾರವನ್ನು ವಿರೋಧಿಸುವವರಿದ್ದಾರೆಯೋ ಎಂದು. ಒಂದು ಪದವು ಅಥವಾ ವಾಕ್ಯವು ಹಿಂದಣ ವಾಕ್ಯಕ್ಕೂ ಮುಂದಣ ವಾಕ್ಯಕ್ಕೂ ಅರ್ಥ ಹಾಯಿಸುವಂತಿದ್ದರೆ ಈ ನ್ಯಾಯವು ಅರ್ಥವಿವರಣೆಗೆ ಸಹಾಯಕ ವಾಗುವುದು.

೨೧. ಸೂಚೀ-ಕಟಾಹ ನ್ಯಾಯ

ಸೂಜಿಯೂ ಕುದಿಸುವ ದೊಡ್ಡ ಕಡಾಯಿಯೂ ಎಂದರ್ಥ. ಬೃಹತ್ಪ್ರಮಾಣದ ಕಡಾಯಿಯೊಡನೆ ಹೋಲಿಸುವಾಗ ಸೂಜಿಯು ಅತ್ಯಂತ ಸೂಕ್ಷ್ಮವೂ ನಿಕೃಷ್ಟವೂ ಆಗಿ ಕಾಣುತ್ತದೆ. ಎರಡು ವಿಷಯಗಳನ್ನು ವಿವರಿಸಬೇಕಾದಾಗ ಗಹನವಾದುದನ್ನು ಮೊದಲು ವಿವರಿಸಿ ಸುಲಭವಾದದ್ದನ್ನು ಮತ್ತೆ ವಿವರಿಸುತ್ತೇವೆ. ಇದಕ್ಕೆ ಸೂಚೀ-ಕಟಾಹ ನ್ಯಾಯವೆನ್ನುತ್ತೇವೆ.

೨೨. ಸ್ಥಾಲೀಪುಲಾಕ ನ್ಯಾಯ

ಚರಿಗೆಯಲ್ಲಿ ಬೇಯುತ್ತಿರುವ ಅನ್ನವೆಂದರ್ಥ. ಅನ್ನ ಬೇಯಿಸುವ ಚರಿಗೆಯಲ್ಲಿ ಕುದಿಯುವ ಎಸರಿನೊಂದಿಗೆ ಮೆತ್ತಗಾದ ಅನ್ನದ ಅಗುಳಲ್ಲಿ ಒಂದರ ಹದ ನೋಡಿದರೆ ಉಳಿದುದೆಲ್ಲ ಅದರಂತೆಯೇ ಎಂದು ತಿಳಿಯಬಹುದು.

ಸಮಾಜದಲ್ಲಿ ಒಬ್ಬ ವ್ಯಕ್ತಿಯ ಗುಣಯೋಗ್ಯತೆಗಳು ಇಡೀ ಸಮಾಜಕ್ಕೆ ಅನ್ವಯಿಸುವದೂ ಸ್ಥಾಲೀಪುಲಾಕ ನ್ಯಾಯದಿಂದ.

೨೩. ಅಂಧದರ್ಪಣ ನ್ಯಾಯ

ಕುರುಡನಿಗಾಗಿ ಕನ್ನಡಿ ಹಿಡಿಯುವದೆಂದರ್ಥ. ಸ್ವಂತ ಬುದ್ಧಿಯಿಲ್ಲದವನಿಗೆ ಶಾಸ್ತ್ರಪಾಠವು ಯಾವುದಕ್ಕಾಗಿ? ಕಣ್ಣುಗಳೇ ಇಲ್ಲದವನಿಗೆ ಕನ್ನಡಿಯಿಂದೇನು ಫಲ?

೨೪. ಅರಣ್ಯರೋದನ ನ್ಯಾಯ

ಕಗ್ಗಾಡಿನಲ್ಲಿ ಕೂಗುವದು ಎಂದರ್ಥ. ವ್ಯರ್ಥವಾದ ಯತ್ನಕ್ಕೆ ಇದನ್ನು ಉದಾಹರಿಸುತ್ತಾರೆ. ಮೂರ್ಖರಾದ ಜನರ ಸೇವೆಯ ಕುರಿತಾದ ಪದ್ಯದಲ್ಲಿ ಈ ನ್ಯಾಯವು ಬಂದಿದೆ: "ಮೂಢರನ್ನು ಸೇವಿಸಿದುದು ಅರಣ್ಯರೋದನವಾಯ್ತು; ಹೆಣದ ಮೈಯ ಅಲಂಕಾರವಾಯ್ತು; ನೆಲದಲ್ಲಿ ಕಮಲವನ್ನು ಬೆಳೆದುದಾಯ್ತು. ಮರಳ್ಗಾಡಲ್ಲಿ ಸುರಿದ ಮಳೆಯಾಯ್ತು; ನಾಯಿ ಬಾಲವನ್ನು ಬಗ್ಗಿಸಿದುದಾಯ್ತು; ಕಿವುಡನ ಕಿವಿಯಲ್ಲಿ ಉಸುರಿದ ಪಿಸು ಮಾತಾಯ್ತು; ಕುರುಡನ ಮುಖಕ್ಕೆ ಮಾಡಿದ ಶೃಂಗಾರದಲಂಕಾರವಾಯ್ತು."

೨೫. ಅರ್ಧವೈಶಸ ನ್ಯಾಯ

ಹೇಂಟೆಯ ಅರ್ಧ ಭಾಗ ಮಾಂಸಕ್ಕೆ, ಅರ್ಧ ಭಾಗ ಮರಿಗಳಾಗುವದಕ್ಕೆ ಎಂದರ್ಥ. ಸರ್ವಥಾ ಸಂಭವಿಸಲಾರದ ವಿಷಯವನ್ನು ಹಿಡಿದು ವಾದಿಸುವಲ್ಲಿ ಈ ನ್ಯಾಯವು ಬರುತ್ತದೆ. ಒಬ್ಬನು ಹೇಂಟೆಯ ಮಾಂಸವನ್ನೂ ಇಚ್ಛಿಸಿದನು. ಅದರಿಂದ ಮುಂದೆ ಮರಿಗಳಾಗುವದನ್ನೂ ಆಶಿಸಿದನು. ಕೊನೆಗೆ ಹೇಂಟೆಯ ಅರ್ಧ ಭಾಗವನ್ನು ಮಾಂಸಕ್ಕಾಗಿ ಕಡಿದು, ಅರ್ಧ ಭಾಗವನ್ನು ಸಂತಾನಕ್ಕಾಗಿ ಮೀಸಲಿಟ್ಟನು. ಇದು ತೀರ ನಡೆಯಲಾರದ ವಿಚಾರ.

೨೬. ಇಷುಕಾರ ನ್ಯಾಯ

ಬಾಣಗಳನ್ನು ರಚಿಸುವವನು ಎಂದರ್ಥ. ಒಬ್ಬನು ತನ್ನ ಕೆಲಸದಲ್ಲಿಯೇ ಮಗ್ನನಾಗಿ ಸುತ್ತಮುತ್ತಣ ಗೊಂದಲವನ್ನು ತಗಲಿಸಿಕೊಳ್ಳದಲ್ಲಿ ಈ ನ್ಯಾಯವನ್ನು ಉದಾಹರಿಸಬಹುದು.

ದಾರಿಯ ಎಡಬಲ ನೋಡದೆ ಮುಖ ತಗ್ಗಿಸಿಕೊಂಡು ಒಬ್ಬ ಮುದುಕನು ಹಳೆ ದಂಟೆಯೂರಿಕೊಂಡು ತನ್ನ ದಾರಿ ಹಿಡಿದು ಸಾಗುತ್ತಿದ್ದನು. ಆತನ ತಲೆಯ ಮೇಲೆ ದಿವ್ಯ ಶಕ್ತಿಯೊಂದು ಉಜ್ವಲವಾದ ರತ್ನಖಚಿತ ಕಿರೀಟವನ್ನು ಹಿಡಿದುಕೊಂಡು ಮುದುಕನು ಕೈಯಲ್ಲಿ ಹಿಡಿದ ಹಳೆ ದಂಟಿಗೆ ಪ್ರತಿಯಾಗಿ ಕೊಡಲು ಸಿದ್ಧವಾಗಿತ್ತು. ಆದರೆ ಆ ಪುಣ್ಯಾತ್ಮ ಕಾಲಿನಡಿ ಧೂಳನ್ನೆಬ್ಬಿಸುತ್ತ ಮುನ್ನಡೆದಿದ್ದನೇ ಹೊರತು ಮೇಲೆ ನೋಡಲಿಲ್ಲ.

೨೭. ಇಷುವೇಗಕ್ಷಯ ನ್ಯಾಯ

ಕುಂಬಾರನ ಚಕ್ರವು ತಿರುಗುತ್ತ ತಿರುಗುತ್ತ ಕ್ರಮೇಣ ತನ್ನ ವೇಗವನ್ನು ಕಳೆದುಕೊಳ್ಳುತ್ತದೆ. ದೇಹವು ಹಳೆಯದಾದಂತೆ ಇಚ್ಛೆಗಳೂ ಇಳಿಮುಖವಾಗುತ್ತವೆ.

೨೮. ಕಟಕಗವೋದಾಹರಣಂ

ಹಟ್ಟಿಯಲ್ಲಿ ಕಟ್ಟಿಯೇ ಅಭ್ಯಾಸವಾದ ದನಗಳು ಹಟ್ಟಿಯಿಂದ ಹೊರಗೆ ಬಯಲಿಗೆ ಮೇಯಲಟ್ಟಿದರೂ ಪುನಃ ಅವು ಹಟ್ಟಿಗೇ ಮರಳುವವು. ಅಭ್ಯಾಸ ಬಲದಿಂದ ನಾವು ಪ್ರತಿದಿನ ತೋರುವ ಅನೇಕ ಚೇಷ್ಟೆಗಳಿಗೆ ಈ ನ್ಯಾಯವು ಉದಾಹರಣೆಯಾಗುವದು.

೨೯. ಕಾಕೋಲೂಕ ನಿಶಾವತ್

ಕಾಗೆ ಮತ್ತು ಗೂಗೆಯ ರಾತ್ರಿಯೆಂದರ್ಥ. ಕಾಗೆಯ ರಾತ್ರೆ ಗೂಗೆಗೆ ಹಗಲಾಗುತ್ತದೆ. ಗೂಗೆಯ ರಾತ್ರೆ ಕಾಗೆಗೆ ಹಗಲಾಗುತ್ತದೆ. "ಎಲ್ಲರಿಗೂ ರಾತ್ರಿಯೆನಿಸಿದಾಗ ಜ್ಞಾನಿಯು ಎಚ್ಚರವಾಗಿರುವನು. ಎಲ್ಲರೂ ಎಚ್ಚರಗೊಂಡಿರುವಾಗ ಜ್ಞಾನಿಗೆ ಅದು ರಾತ್ರಿಯಾಗಿರುವದು" ಎಂಬ ಗೀತೆಯ ಮಾತನ್ನು ಇಲ್ಲಿ ಸ್ಮರಿಸಬಹುದು.

ಸುರೇಶ್ವರಾಚಾರ್ಯರು ವಾರ್ತಿಕದಲ್ಲಿ "ತಿಳುವಳಿಕೆಯುಳ್ಳವನಿಗೂ ತಿಳುವಳಿಕೆಯಿಲ್ಲದವನಿಗೂ ಸಂಸಾರವು ಕಾಗೆ-ಗೂಗೆಗಳ ರಾತ್ರೆ-ಹಗಲುಗಳಂತೆ ಸುಖದುಃಖಗಳನ್ನು ತರುವವು" ಎಂದು ಉದಾಹರಿಸಿರುವರು.

೩೦. ಕ್ಷೀರ-ನೀರ ನ್ಯಾಯ

ಹಾಲಿನಲ್ಲಿ ಬೆರೆತ ನೀರು ಎಂದರ್ಥ. ಹಾಲಿನಲ್ಲಿ ನೀರನ್ನು ಬೆರೆಸಿದರೆ ಅದು ಎಷ್ಟು ಪ್ರಮಾಣದಲ್ಲಿ ಬೆರೆತಿದೆಯೆಂದು ನೋಡಿದೊಡನೆ ತಿಳಿಯುವದಿಲ್ಲ. ಗಾಢವಾಗಿ ಒಂದರೊಡನೊಂದು ಬೆರೆತುಕೊಳ್ಳುವದಕ್ಕೆ 'ಕ್ಷೀರ-ನೀರ ನ್ಯಾಯ'ವೆನ್ನಬಹುದು. ಎರಡು ವಸ್ತುಗಳು ಒಂದರಿಂದ ಮತ್ತೊಂದು ಬೇರ್ಪಡುವಂತೆ ಬೆರೆತಿರುವದು (ಎಳ್ಳು ಮತ್ತು ಅಕ್ಕಿ) ಸಂಸೃಷ್ಟಿಯೆಂದೂ, ಕ್ಷೀರ–ನೀರ ನ್ಯಾಯದಿಂದ ಬೆರೆತಿರುವದು ಸಂಕರವೆಂದೂ ಅಲಂಕಾರ ಸರ್ವಸ್ವದಲ್ಲಿ ಹೇಳಿಕೆಯಿದೆ.

೩೧. ಘಟೀಯಂತ್ರ ನ್ಯಾಯ

ಒಂದೇ ಸವನೆ ತಿರುಗುತ್ತಿರುವ ಬಾವಿಯ ಯಂತ್ರವೆಂದರ್ಥ. ಸುರೇಶ್ವರಾಚಾರ್ಯರ ವಾರ್ತಿಕದಲ್ಲಿ "ಬಯಕೆಗಳಿಗೆ ಬಾಯ್ಬಿಡುತ್ತ ಹುಟ್ಟು ಸಾವುಗಳ ಆವೃತ್ತಿಯುಳ್ಳ ಸಂಸಾರದಲ್ಲಿ ಅವಿಶ್ರಾಂತವಾಗಿ ತಿರುಗುವವನನ್ನು ಘಟೀಯಂತ್ರ" (ಬಾವಿಗೆ ತಗಲಿಸಿದ ಯಂತ್ರ ಚಕ್ರ)ಕ್ಕೆ ಸರಿಹೋಲಿಸಿರುವರು. ಪ್ರಬಂಧ ಚಿಂತಾಮಣಿಯಲ್ಲಿ ಇದನ್ನು ಇನ್ನೊಂದು ರೀತಿಯಲ್ಲಿ ಅರ್ಥವಿಸಿರುವರು: "ಚಕ್ರಯಂತ್ರವು ಕೆಳಗಿಂದ ಮೇಲಕ್ಕೆ ಬರುವಾಗ ತುಂಬಿಕೊಂಡಿದ್ದು ಮೇಲಿನಿಂದ ಕೆಳಕ್ಕಿಳಿಯುವಾಗ ಬರಿದಾಗುವಂತೆ ಭಾಗ್ಯಚಕ್ರವು ತಿರುಗುತ್ತಿರುತ್ತದೆ. ಧನಮದದಿಂದ ಮೋಹಗೊಂಡು ಬಡವರನ್ನು ಅಣಕಿಸುವದೇಕೆ?" ಎಂಬ ಮಾತು ಬಂದಿದೆ.

೩೨. ತಸ್ಕರ ಕಂದು ನ್ಯಾಯ

ಕಳ್ಳನು ಅಡಿಗೆಯವನಂತೆ ವೇಷ ತಳೆಯುವದು ಎಂದರ್ಥ. ನಮಗೆ ಎಟಕದ ಕೆಲಸಕ್ಕೆ ಕೈಹಚ್ಚುವವರ ಪರಿಣಾಮವನ್ನು ಈ ನ್ಯಾಯವು ಬೋಧಿಸುತ್ತದೆ. ಒಬ್ಬ ಕಳ್ಳನು ಕದ್ದುಕೊಂಡ ಸ್ವತ್ತನ್ನು ರಕ್ಷಿಸುವದಕ್ಕೆ ಒಬ್ಬ ಅಡಿಗೆಯವನ ಮನೆಯನ್ನು ಪ್ರವೇಶಿಸುತ್ತಾನೆ. ಅಡಿಗೆಯವನು ಅವನನ್ನು ಕಂಡು ಅಡಿಗೆ ಕೆಲಸವನ್ನು ಆತನಿಗೊಪ್ಪಿಸಿದ್ದಾಗ ಕಳ್ಳನಿಗೆ ಆ ಕೆಲಸ ಬರುವದಿಲ್ಲ. ಆಗ ಪೋಲೀಸಿನವರು ಆ ಮನೆಗೆ ಬಂದು ಆ ಅಜ್ಞಾತ ವ್ಯಕ್ತಿಯಲ್ಲಿ ಸಂದೇಹ ತಳೆದು ಅವನನ್ನು ಸೆರೆಹಿಡಿಯುತ್ತಾರೆ.

೩೩. ತೃಣ ಜಲಾಯುಕ ನ್ಯಾಯ

ಕಂಬಳಿ ಹುಳವು ಒಂದು ಹುಲ್ಲಿನ ಕೊನೆಯಿಂದ ಮತ್ತೊಂದು ಹುಲ್ಲಿನ ತುದಿಯಲ್ಲಿ ತೂರಿಕೊಂಡ ಬಳಿಕ ತನ್ನ ದೇಹವನ್ನು ಅತ್ತ ಸೆಳೆದು ಕೊಳ್ಳುತ್ತದೆ. ಜೀವನು ದೇಹದಿಂದ ದೇಹಕ್ಕೆ ಹಾದುಹೋಗುವುದಕ್ಕೆ ಈ ನ್ಯಾಯವನ್ನು ಉದಾಹರಿಸಿದ್ದಾರೆ.

೩೪. ತೈಲಪಾತ್ರಧರ ನ್ಯಾಯ

ತುಂಬಿ ಸೂಸುವ ಎಣ್ಣೆಯ ಪಾತ್ರವನ್ನು ಹಿಡಿದವನು ಎಂದರ್ಥ. ಆ ಎಣ್ಣೆಯಲ್ಲಿ ಒಂದು ಬಿಂದು ಹೊರಗೆ ಜಿನುಗಿದರೆ ಅವನಿಗೆ ಮರಣ ಶಿಕ್ಷೆ ಯಿದೆ. ವ್ರತವನ್ನು ಕೈಕೊಂಡವನು ಅತಿ ಜಾಗ್ರತೆಯಿಂದ ವರ್ತಿಸಬೇಕೆಂಬು ದಕ್ಕೆ ಈ ನ್ಯಾಯವು ಅರ್ಥಪುಷ್ಟಿ ಕೊಡುತ್ತದೆ.

೩೫ ಪ್ರದೀಪವತ್

ಕಾಡಿನ ಒಂದು ಮೊಡಕಿನಲ್ಲಿ ಕುಳಿತ ಓರ್ವ ಸಾಧಕನು ಜಗತ್ತಿಗೆ ತನ್ನ ಸತ್ಯದರ್ಶನದ ಬೆಳಕನ್ನು ಕೊಡುತ್ತಾನೆ. ಒಂದೆಡೆ ಇರಿಸಿದ ದೀಪವು ಇಡೀ ಭವನವನ್ನು ಬೆಳಗುವಂತೆ, ನರ್ತಕಿಯೋರ್ವಳು ಹಲವು ಸಾಮಾಜಿಕ ರನ್ನು ತನ್ಮಯಗೊಳಿಸುವಂತೆ.

೩೬ ಬಕಬಂಧನ ನ್ಯಾಯ

ಒಬ್ಬನು ಒಂದು ಕೊಕ್ಕರೆಯನ್ನು ಹಿಡಿಯಲೋಸುಗ ಒಂದು ಬೆಣ್ಣೆ ಮುದ್ದೆಯನ್ನು ಅದರ ತಲೆಯಲ್ಲಿರಿಸಿದನಂತೆ. ಮಧ್ಯಾಹ್ನದ ಬಿಸಿಲಿನ ಝಳಕ್ಕೆ ಬೆಣ್ಣೆ ಕಾದು ಕರಗಿ ನೀರಾಗಿ ಅದರ ಕಣ್ಣಿಗೆ ಹರಿದು, ಕಣ್ಣುಕುರು ಡಾದ ಬಳಿಕ ಆ ಕೊಕ್ಕರೆಯನ್ನು ಸುಲಭವಾಗಿ ಹಿಡಿಯಬಹುದೆಂದು ಅವನ ಯುಕ್ತಿಯಾಗಿದ್ದಿತು. ಇದು ತೀರ ಹಾಸ್ಯಾಸ್ಪದ. ಹಾಸ್ಯಾಸ್ಪದವಾದ ವಿಚಾರವನ್ನು ಮುಂದಿಟ್ಟರೆ ಈ ನ್ಯಾಯವನ್ನು ಹೇಳಬಹುದು.

೩೭. ಭೂಲಿಂಗ ನ್ಯಾಯ

ಹಿಮವತ್ಪ್ರದೇಶದಲ್ಲಿ ಭೂಲಿಂಗವೆಂಬ ಹಕ್ಕಿಯಿದೆ. ಅದರ ಕೂಗು ಯಾವಾಗಲೂ 'ಸಾಹಸಕ್ಕೆ ಕೈಹಚ್ಚ ಬೇಡಿರೆ'ಂದು. ಆದರೆ ತಾನು ಮಾತ್ರ

ಸಿಂಹವು ಮಾಂಸವನ್ನು ಮೆಲ್ಲುತ್ತಿರುವಾಗ ಅದರ ಕೋರೆದಾಡೆಯ ಎಡೆಯಲ್ಲಿ ಸಿಕ್ಕಿದ ಮಾಂಸದ ತುಣುಕುಗಳನ್ನು ಕೊಕ್ಕಿನಿಂದ ಕುಕ್ಕುತ್ತಿರುತ್ತದೆ. ಒಬ್ಬನು ಮಾತಿನಂತೆ ವರ್ತಿಸದಿದ್ದರೆ ಈ ನ್ಯಾಯವನ್ನು ಉದಾಹರಿಸಬಹುದು. ಪರೋಪದೇಶಮಾತ್ರ ಕುಶಲನು ತಾನು ಮನಸ್ಸು ಬಂದಂತೆ ವರ್ತಿಸಿ ದಾಂಭಿಕನೆನಿಸುವನು.

೩೮. ಮತ್ಸ್ಯನ್ಯಾಯ

ಮೀನುಗಳ ಜೀವನದಿಂದ ಆಯ್ದುಕೊಂಡ ನ್ಯಾಯವಿದು. ಬಲಿಷ್ಠರಿಗೂ ದುರ್ಬಲರಿಗೂ ವಿರೋಧವುಂಟಾದಾಗ ಬಲಿಷ್ಠನು ದುರ್ಬಲನನ್ನು ಪೀಡಿಸುತ್ತಾನೆ. ಎರಡು ನ್ಯಾಯಗಳಿಗೆ ಪರಸ್ಪರ ವಿರೋಧ ಕಂಡಾಗ ಬಲಿಷ್ಠ ನ್ಯಾಯವು ದುರ್ಬಲ ನ್ಯಾಯವನ್ನು ಬಾಧಿಸುತ್ತದೆ. ಮೀನುಗಳಲ್ಲಿಯೂ ದೊಡ್ಡ ಮೀನು ಸಣ್ಣ ಮೀನನ್ನು ತಿಂದು ಜೀವನ ನಡೆಸುತ್ತದೆ.

೩೯. ಮಾಷರಾಶಿ ಪ್ರವಿಷ್ಟಮಷೀ ನ್ಯಾಯ

ಉದ್ದಿನ ರಾಶಿಯಲ್ಲಿದ್ದ ಮಸೀ ತುಂಡೆಂದರ್ಥ. ಉದ್ದಿನ ರಾಶಿಯಲ್ಲಿದ್ದ ಮಸಿಯನ್ನು ಥಕ್ಕನೆ ಗುರುತಿಸಲು ಆಗುವದಿಲ್ಲ. ಏಕೆಂದರೆ ಅವೆರಡೂ ಸರೂಪಗಳು. ಶೂದ್ರಕ ಮಹಾಕವಿಯು ಬರೆದ ಮೃಚ್ಛಕಟಿಕ ನಾಟಕದಲ್ಲಿ ಈ ನ್ಯಾಯವು ಬಂದಿದೆ. "ಉದ್ದಿನ ರಾಶಿಯಲ್ಲಡಗಿ ಹೋದ ಮಸಿಯಂತೆ ನೋಡುತ್ತ ನೋಡುತ್ತ ಇದ್ದ ಹಾಗೆ ವಸಂತ ಸೇನೆಯು ಕತ್ತಲೆಯಲ್ಲಿ ಕಾಣದಾದಳು"

೪೦. ಮಿಥಿಲಾಯಾಂ ಪ್ರದೀಪ್ತಾಯಾಂ ನಮೇದಹ್ಯತಿ ಕಿಂಚನ

ನಿರ್ಮಮತೆಗೆ ಇದಕ್ಕಿಂತ ಮೇಲಿನ ಉದಾಹರಣೆ ಸಾಹಿತ್ಯ ಪ್ರಪಂಚದಲ್ಲಿಯೇ ದೊರಕಲಾರದು. ಮಿಥಿಲಾ ಪಟ್ಟಣವು ಸುಡುತ್ತಿದ್ದರೂ ನನ್ನದಾದುದು ಯಾವುದೂ ನಷ್ಟವಾಗುತ್ತಿಲ್ಲವೆಂದು ಯೋಗೀಶ್ವರನಾದ ಜನಕನು ಹೇಳುತ್ತಾನೆ. ಕಳೆದುಕೊಳ್ಳಲು ತನ್ನದಾದುದು ಯಾವುದೂ ಇಲ್ಲದವನಿಗೆ ಕಳೆದು ಹೋಗುವಾಗ ಯಾವ ಚಿಂತೆಯೂ ಆಗುವದಿಲ್ಲ.

೪೧. ಯಾದೃಶೋ ಯಕ್ಷಃ ತಾದೃಶೋ ಬಲಿ

ಯಕ್ಷನು ಎಂಥವನೋ ಅವನಿಗೆ ಒಪ್ಪಿಸುವ ಬಲಿಯೂ ಅಂಥದೇ ಆಗಿರಬೇಕು. ವಾಚಸ್ಪತಿ ಮಿಶ್ರನೂ, ಜಯಂತ ಭಟ್ಟನೂ ಈ ನ್ಯಾಯವನ್ನು ಬಳಸಿರುವರು. ನಯವಾದ ಪ್ರಶ್ನೆಗೆ ನಯವಾದ ಉತ್ತರವು ದೊರಕುವಂತೆ ಜೋರಾದ ಗದರಿಕೆಗೆ ಗದರಿಕೆಯ ಉತ್ತರವೇ ದೊರಕುತ್ತದೆ. ಇದು ಮೇಲೆ ಹೇಳಿದ ನ್ಯಾಯಕ್ಕನುಸಾರವಾಗಿದೆ.

೪೨. ರಾಜಪುತ್ರ-ವ್ಯಾಧ ನ್ಯಾಯ

ಬೃಹದಾರಣ್ಯಕ ಉಪನಿಷತ್ತಿನ ಶಾಂಕರ ಭಾಷ್ಯದಲ್ಲಿ ಈ ಕತೆಯು ಉದಾಹೃತವಾಗಿದೆ. ಒಬ್ಬ ಅರಸುಮಗನು ಹುಟ್ಟಿದ ಕೂಡಲೇ ಹೆತ್ತವರು ಅವನನ್ನು ಬಿಟ್ಟರು. ಆ ಮಗುವನ್ನು ಒಬ್ಬ ಬೇಡರವನು ಸಾಕಿದನು. ಆ ಹುಡುಗನು ತಾನು ಯಾರ ಮಗನೆಂಬುದನ್ನರಿಯದೆ ಬೇಡರ ಮನೆಯಲ್ಲಿ ಬಳೆದನು. ಬೇಡರ ಸಹಜವಾದ ಕೆಲಸಗಳನ್ನೇ ಮಾಡುತ್ತಿದ್ದನು. ಕ್ಷತ್ರಿಯರ ತೇಜಸ್ಸು ಅವನಲ್ಲಿ ಅಡಗಿದ್ದಿತು. ಒಬ್ಬ ಕರುಣಾಳುವು ಅವನ ಮೂಲವನ್ನು ತಿಳಿದು ಅವನು ರಾಜಕುಮಾರನೆಂದೂ ಕ್ಷತ್ರಿಯನೆಂದೂ ತಿಳಿಸುತ್ತಾನೆ. ಬಳಿಕ ತನ್ನ ನಿಜವನ್ನರಿತ ಬಾಲಕನು ತನ್ನ ತಂದೆ ತಾತ ಮುತ್ತಾತಂದಿರಂತೆ ವೀರನಾಗಿ ಅರಸುತನಗೈಯುವನು. ತನ್ನ ಸ್ವರೂಪದ ತಿಳುವಳಿಕೆಯಿಲ್ಲದೆ ಅಜ್ಞಾನದಲ್ಲಿ ಮುಳುಗುತ್ತಿರುವ ಜೀವವನ್ನು ಓರ್ವ ಕರುಣಾಳು ಗುರುವು ಅನುಗ್ರಹಿಸುತ್ತಾನೆ ಎಂಬುದಕ್ಕೆ ಮೇಲಣ ಕತೆಯು ದೃಷ್ಟಾಂತವಾಗಿದೆ.

೪೩. ಲಾಂಗಲಂ ಜೀವನಂ

ನೇಗಿಲೇ ಜೀವನವೆಂದರ್ಥ. ಆಯುಷ್ಯವನ್ನು ಹೆಚ್ಚಿಸುವ ತುಪ್ಪವನ್ನು ಆಯುಷ್ಯವೇ ತುಪ್ಪವೆಂದು ಹೇಳಿದಂತೆ ಈ ಮಾತು ಇದೆ. ಕಾರಣವನ್ನೂ ಅದರಿಂದುಂಟಾದ ಕಾರ್ಯವನ್ನೂ ಒಂದೇ ಎನುವಲ್ಲಿ ಈ ನ್ಯಾಯವು ಉಪಯುಕ್ತವಾಗಿದೆ.

೪೪. ವಧೂಮಾಷ ಮಾಪನ ನ್ಯಾಯ

ಸೊಸೆಯು ಕೈಯಿಂದ ಕೊಡಿಸಿದ ಧಾನ್ಯವೆಂದರ್ಥ. ಆತ್ಮತತ್ತ್ವ ವಿವೇಕದಲ್ಲಿ ಈ ನ್ಯಾಯವು ಇದೆ. ಓರ್ವ ಲೋಭಿಯಾದ ಮುದುಕನು ಮನೆಗೆ ಬಂದ ಬೇಡುವವರಿಗೆ ಹೆಂಡತಿಯ ಕೈಯಿಂದ (ತನ್ನ ಮುಷ್ಟಿಯಿಂದ ಆಕೆಯ ಮುಷ್ಟಿಯು ಸಣ್ಣದೆಂಬ ಕಾರಣದಿಂದ) ಒಂದೊಂದು ಮುಷ್ಟಿ ಧಾನ್ಯವನ್ನು ಕೊಡಿಸುತ್ತಿದ್ದನು. ಹೀಗಿರಲಾಗಿ ಮುದುಕನ ಮಗನಿಗೆ ಮದುವೆಯಾಯಿತು. ಸೊಸೆ ಮನೆಗೆ ಬಂದಳು. ಆಗ ಮುದುಕನಿಗೆ ಒಂದು ಆಲೋಚನೆ ಹೊಳೆಯಿತು. ಹೆಂಡತಿಯ ದೊಡ್ಡ ಮುಷ್ಟಿಯಲ್ಲಿ ಧಾನ್ಯ ಕೊಡಿಸುವದಕ್ಕಿಂತ ಸೊಸೆಯ ಸಣ್ಣ ಹಿಡಿಯಲ್ಲಿ ಧಾನ್ಯ ಕೊಡಿಸಿದರೆ ತುಸು ಉಳಿತಾಯವಾಗಬಹುದೆಂದು ಆತನು ಬಗೆದನು. ಬೇಡುವವರಿಗೆ ಧಾನ್ಯ ಹಂಚಲು ಸೊಸೆಯನ್ನೇ ನೇಮಿಸಿದನು. ಸೊಸೆಯು ಚೆಲುವೆಯಾಗಿದ್ದಳು. ಆಕೆಯ ರೂಪವನ್ನು ಸವಿಯಲು ನೂರಾರು ಮಂದಿ ಭಿಕ್ಷೆಯ ನೆವದಿಂದ ಮನೆ ಬಾಗಿಲಿಗೆ ಬಂದರು. ಆಗ ಒಂದೊಂದು ಮುಷ್ಟಿಯಲ್ಲಿ ಕೊಂಚ ಧಾನ್ಯ ಕಡಿಮೆ ನಿಂತರೂ, ಅನೇಕ ಮಂದಿ ಮನೆಗೆ ಬಂದುದರಿಂದ ಖರ್ಚಾದ ಧಾನ್ಯದ ಮೊತ್ತವು ಹೆಚ್ಚಾಯಿತು.

೪೫. ವನಸಿಂಹ ನ್ಯಾಯ

ಕಾಡು ಮತ್ತು ಸಿಂಹವೆಂದರ್ಥ. ಕಾಡಿನಲ್ಲಿ ಸಿಂಹವು ಇರುವುದು ಸಹಜವಾದ್ದರಿಂದ ಕಾಡು ಮತ್ತು ಸಿಂಹ ಇವೆರಡೂ ಪರಸ್ಪರ ಪೂರಕ ತತ್ತ್ವಗಳು. ಬೇಡರು ಸಿಂಹವನ್ನು ಹಿಂಬಾಲಿಸಿ ಕೊಲ್ಲಲುದ್ದೇಶಿಸಿದರೂ, ಕಾಡನ್ನು ಸಿಂಹವು ಹೊಕ್ಕ ಬಳಿಕ ಅದನ್ನು ಕೊಲ್ಲಲಾಗುವದಿಲ್ಲ. ಏಕೆಂದರೆ, ಗಹನವಾದ ಕಾಡನ್ನು ಪ್ರವೇಶಿಸಲು ಬೇಡರಿಗೆ ಧೈರ್ಯ ಸಾಲದು.

Edited, Printed & Published by K. V. Shenoy
at The Prabhat Printers, Ltd., Mangalore.